ಕರ್ನಾಟಕ ವಿಧಾನ ಪರಿಷತ್

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1309
2	ಸದಸ್ಯರ ಹೆಸರು	:	ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	:	27.02.2018
4	ಉತ್ತರಿಸುವ ಸಚಿವರು	:	ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರೈತರ ಸಂತೆ ಎಂದರೇನು; ಈ ಯೋಜನೆಯನ್ನು ಯಾವಾಗಿನಿಂದ ಜಾರಿಗೆ ತರಲಾಗಿದೆ	ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ತಂದು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಎಲ್ಲಾ ಸೌಲಭ್ಯಗಳನ್ನೊಳಗೊಂಡ ವ್ಯವಸ್ಥಿತ ಸಂತೆಯೇ ರೈತರ ಸಂತೆ. ಈ ಯೋಜನೆಯನ್ನು 2002 ರಿಂದ ಜಾರಿಗೆ ತರಲಾಗಿದೆ.
ಆ	ರಾಜ್ಯದಲ್ಲಿರುವ ಒಟ್ಟು ರೈತರ ಸಂತೆಗಳ ಸಂಖ್ಯೆ ಎಷ್ಟು; ಅವು ಯಾವುವು; (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ನೀಡುವುದು)	ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಯಲಹಂಕ ಸಂತೆ ಮೈದಾನದಲ್ಲಿ ಒಂದು ರೈತರ ಸಂತೆಯನ್ನು ದಿನಾಂಕ: 04.07.2002 ರಿಂದ ಪ್ರಾರಂಭಿಸಲಾಗಿದೆ.
ಇ	ರೈತರ ಸಂತೆಯಲ್ಲಿ ಮಳಿಗೆಗಳನ್ನು ತೆರೆಯಲು ನಿಗಧಿಪಡಿಸಿರುವ ಮಾನದಂಡಗಳೇನು;	ಪಹಣಿ ಆಧಾರದ ಮೇಲೆ ಪ್ರತಿದಿನ ಸಂತೆಗೆ ಬರುವ ರೈತರಿಗೆ ಗುರುತಿನ ಚೀಟಿಗಳನ್ನು ನೀಡಿ, ರೈತರ ಸಂತೆಯಲ್ಲಿ ಜಾಗವನ್ನು ನಿಗಧಿಪಡಿಸಿ ಗ್ರಾಹಕರಿಗೆ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಲಾಗುವುದು.
ಈ	ರೈತರ ಸಂತೆಯಲ್ಲಿ ರೈತರ ಹೊರತಾಗಿ ಇತರ ವ್ಯಾಪಾರಸ್ಥರು ಮಳಿಗೆಗಳನ್ನು ತೆರೆದು ವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ.
ಉ	ರೈತರ ಸಂತೆಯಲ್ಲಿ ರೈತರಿಂದ ನೇರ ಮಾರಾಟ ವ್ಯವಸ್ಥೆ ಇರುವ ಬದಲು ಮಧ್ಯವರ್ತಿಗಳೇ ಹೆಚ್ಚಿನ ವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಊ	ಮಧ್ಯವರ್ತಿಗಳನ್ನು ಹಾಗೂ ಇತರ ವ್ಯಾಪಾರಸ್ಥರು ರೈತರ ಸಂತೆ ಪ್ರವೇಶಿಸುವುದನ್ನು ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?	ಪಹಣಿ ಆಧಾರದ ಮೇಲೆ ಪ್ರತಿದಿನ ಸಂತೆಗೆ ಬರುವ ರೈತರಿಗೆ ಗುರುತಿನ ಚೀಟಿಗಳನ್ನು ನೀಡುವ ಮೂಲಕ ಮಧ್ಯವರ್ತಿಗಳನ್ನು ಹಾಗೂ ಇತರೆ ವ್ಯಾಪಾರಸ್ಥರು ರೈತರ ಸಂತೆ ಪ್ರವೇಶಿಸುವುದನ್ನು ತಡೆಯಲು ಕ್ರಮ ವಹಿಸಲಾಗಿದೆ. ಹಾಗೂ ಸ್ಥಳೀಯ ಅಧಿಕಾರಿಗಳು ಈ ಕುರಿತಂತೆ ನಿರಂತರವಾಗಿ ಪರಿಶೀಲಿಸಲು ಸಹ ತಿಳಿಸಲಾಗಿರುತ್ತದೆ.

ಸಂಖ್ಯೆ: ಸಇ 88 ಎಂಆರ್‌ಇ 2018

(ಎಸ್.ಎಸ್. ಮಲ್ಲಿಕಾರ್ಜುನ್)
ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು

ಎಸ್.ಎಸ್. ಮಲ್ಲಿಕಾರ್ಜುನ್